‘ನೋಡು, ಸುಖೀರಾಮ್ ವಿಲ್ಲಾದ ಕಳವಿನ ತನಿಖೆ ತೀರಾ ಗುಟ್ಟಿನಲ್ಲಿ ನಡೆಯುತ್ತಿದೆ, ಕಳ್ಳತನವಾಗಿರುವ ಮಾಹಿತಿ ಇನ್ನೂ ಈ ನಾಲ್ಕು ಗೋಡೆಗಳಾಚೆ ಹೋಗಿಲ್ಲ. ಅಂತಹುದರಲ್ಲಿ ಯಾವನೋ ಆಗಂತುಕ ಬಂದು ‘ಕಂಪೌಂಡ್ ಹಾರಿರೋದು ಹೆಣ್ಣಲ್ಲ, ಗಂಡು’ ಅಂತ ಹೇಳಿದರೆ ಏನರ್ಥ? ಅವನೇ ಕಳ್ಳ ಅಂತ ತಾನೇ? ಆದರೆ, ಕಳ್ಳ ತಾನೇ ಬಂದು ತನ್ನ ‘ಗೋಡೆ ಹಾರುವ ಚಿತ್ರ’ವನ್ನು ಸೆಕ್ಯುರಿಟಿ ಆಫೀಸರ್‌ಗೆ ಯಾಕೆ ಕೊಡಬೇಕು? ಅನ್ನೋ ಪ್ರಶ್ನೆ ನಿಮ್ಮ ತಲೆಯಲ್ಲಿ ಎದ್ದಿದೆಯಲ್ಲವೇ? ಅದಕ್ಕೆ ಉತ್ತರವನ್ನು ಇದೇ ಈಗ ಪ್ರೀತಮ್ ಹೇಳಿದರು; ಕಳ್ಳತನ ಮಾಡಿದ ವ್ಯಕ್ತಿಯ ಡಿಎನ್‌ಎ ಸುಖೀರಾಮ್‌ರ ಅಂದರೆ ಒಬ್ಬ ತಂದೆಯ ಡಿಎನ್‌ಎಗೆ ಆಗಬೇಕಾದಷ್ಟು ಹೊಂದಿಕೆ ಆಗಿಲ್ಲವಂತೆ’.

‘ಮತ್ತೆ ...’ ಶಿವಾನಿ, ಶಾಮಸುಂದರ ಏಕಕಾಲಕ್ಕೆ ಉದ್ಗರಿಸಿದರು.

‘ಅದಕ್ಕೂ ಸ್ವಲ್ಪ ಕಮ್ಮಿ, ಮೇ ಬಿ ತಾತನ ಡಿಎನ್‌ಎಗೆ ಆಗುವಷ್ಟು ಹೊಂದಿಕೆಯಾಗಿದೆಯಂತೆ’

‘ಓ ಮೈ ಗಾಡ್!’ ಶಿವಾನಿಯಷ್ಟೇ ಉದ್ಗರಿಸಿದಳು, ಶಾಮಸುಂದರರ ಮುಖವಿನ್ನೂ ಅರಳಲಿಲ್ಲ.

ಗಾರ್ಡ್ ಓಡಿ ಬಂದ. ‘ಸರ್ ಆ ಮನುಷ್ಯ ಸಿಗಲಿಲ್ಲ ಆದರೆ ಈ ಪುಸ್ತಕ ಕಂಪೌಂಡಿನಾಚೆ ಹುಲ್ಲಿನಲ್ಲಿ ಬಿದ್ದಿತ್ತು ಸರ್. ಓಡುವಾಗ ಬಿದ್ದಿರಬಹುದು...’ ಅನ್ನುತ್ತಾ ಯಾವುದೋ ದಪ್ಪ ರಟ್ಟಿನ ಕಾದಂಬರಿಯನ್ನು ಸೆಕ್ಯುರಿಟಿ ಆಫೀಸರರ ಕೈಗಿತ್ತ.

‘ಕಲ್ಪನಾಗೆ ಸುಮಾರು ನಾಲ್ವತ್ತರ ಹರೆಯವಿರಬಹುದು, ಸೋ ಹದಿನೈದರ ಮಗ, ಕ್ವಯಟ್ ಪಾಸಿಬಲ್’ ತಮ್ಮಲ್ಲೇ ಜನಾರ್ದನರು ಮಾತನಾಡಿಕೊಳ್ಳುವಾಗ ‘ಸರ್ ಈ ಜಾಣ ಆಗಂತುಕ ಪುಸ್ತಕದಲ್ಲಿ ಅಡ್ರೆಸ್ ಬರೆದಿಟ್ಟಿದ್ದಾನೆ ನೋಡಿ’ ಎನ್ನುತ್ತಾ ಶಾಮಸುಂದರ ಕಾದಂಬರಿಯ ಮೊದಲ ಹಾಳೆ ತೋರಿಸಿ ನಕ್ಕರು, ಅವರ ಮುಖದ ಒಗಟೀಗ ಬಿಚ್ಚಿತ್ತು. ಎಲ್ಲ ಒಟ್ಟಿಗೆ ಒಳನಡೆದರು.

‘ಕಳ್ಳ ಕೊಂಡು ಹೋಗಿಲ್ಲ, ಕೊಟ್ಟು ಹೋಗಿದ್ದಾನೆ ಸರ್’– ಮರುದಿನ, ಕವಿತೆಯ ಸಾಲಿನಂತೆ ಜನಾರ್ದನರು ತನಿಖಾ ವರದಿ ಕೊಟ್ಟಾಗ ಚಕಿತರಾದರು ಸುಖೀರಾಮ್. ಜನಾರ್ದನ ಮುಂದುವರಿಸಿದರು

‘ಬಂದವ ಕಳ್ಳನಲ್ಲ ಸರ್, ನಿಮ್ಮ ಮೊಮ್ಮಗ’

‘ಅಂದರೆ?’

‘ಕಲ್ಪನಾರ ಮಗ ದಿಗಂತ್’

ಸುಖೀರಾಮರ ಕಣ್ಗಳ ಸುತ್ತ ಗೆರೆಯೆಳೆದಂತೆ ಕಪ್ಪಾಯ್ತು.

‘ಕಲ್ಪನಾ ಎಂಡೋಮೆಟ್ರಿಕ್ ಕ್ಯಾನ್ಸರ್‌ಗೆ ಬಲಿಯಾಗಿ ಆರು ತಿಂಗಳಾಯ್ತು ಸರ್. ತಾಯಿಯ ಕೊನೆಯ ಇಚ್ಛೆಯಂತೆ ದಿಗಂತ್ ನಿಮ್ಮನ್ನರಸಿ ಬಂದ, ಕಳ್ಳನಂತೆ ಬಂದಿದ್ದೂ, ಡಿಎನ್‌ಎ ಪರೀಕ್ಷೆಗೆ ಅನುಕೂಲವಾಗುವಂತೆ ತನ್ನ ಕೂದಲಿನ ಸ್ಯಾಂಪಲ್ ಕಪಾಟಿನ ಹಿಡಿಕೆಯ ಮೇಲೆ ಮತ್ತು ಡಾಕ್ಯುಮೆಂಟುಗಳ ಫೈಲುಗಳ ನಡುವೆ ಬೀಳಿಸಿದ್ದೂ ಮುಂದೆ ತಾನು ಕಾಂಪೌಂಡ್ ಹಾರುವ ಚಿತ್ರ ತಾನೇ ಬರೆದು ಸೆಕ್ಯುರಿಟಿ ಆಫೀಸರ್‌ಗೆ ಕೊಟ್ಟಿದ್ದೂ ಎಲ್ಲ ಅವನ ಪ್ಲ್ಯಾನ್‌ನ ಅಂಶಗಳೇ. ನಿಮ್ಮ ಬಳಿ ಸಾರಲು ಯಾಕಿಂಥ ತಂತ್ರ ಬಳಸಿದ ಅನ್ನೋದು ಕೂಡ ತಿಳಿಯುತ್ತೆ ಸರ್. ನಿಮ್ಮ ಮತ್ತು ಕಲ್ಪನಾರ ನಡುವೆ ಇದ್ದ ಬಿರುಕು ಅವನಲ್ಲಿ ನಿಮ್ಮ ನಿರಾಕರಣೆಯ ಭಯ ತುಂಬಿಸಿರಬಹುದು...’ ಎನ್ನುತ್ತಾ ಮಾತು ನಿಲ್ಲಿಸಿದ ಜನಾರ್ದನರು ಸುಖೀರಾಮರ ಗಲ್ಲದಗುಂಟ ಇಳಿದು ಬೆಳಕಿಗೆ ಫಳಗುಟ್ಟಿದ ಹನಿಯನ್ನೇ ದಿಟ್ಟಿಸಿದರು.

ಎಪಿಲೋಗ್: ನೀವೀಗ ‘ಸುಖೀರಾಮ್ ವಿಲ್ಲಾ’ಗೆ ಬಂದರೆ ಒಂದು ಖಡಕ್ ನಗುವಿನೊಂದಿಗೆ ಧ್ವನಿಯೊಡೆದ ದಿಗಂತ್‌ನ ಜೋರು ನಗೆಯೂ ಸೇರಿಕೊಂಡು ಮನೆ ದಿಮಿಗುಡುವುದನ್ನು ಕೇಳ ಬಹುದೇನೋ? ಒಮ್ಮೊಮ್ಮೆ ಮೊಮ್ಮಗನ ಹೆಗಲು ಬಳಸಿಕೊಂಡು, ಗಂಧದ ಹಾರ ಹಾಕಿದ ಕಲ್ಪನಾಳ ಫೋಟೋದ ಮುಂದೆ ನಿಂತು ಕಣ್ಣೊರೆಸಿಕೊಳ್ಳುವ ಸುಖೀರಾಮರು ಕಂಡರೂ ಕಾಣಬಹುದು. ಹೋ.... ಆದರೀಗ ನೀವು ಅವರನ್ನು ಗುರುತಿಸಲಾರಿರೇನೋ, ಏನಂದ್ರೀ?... ಹೌದೌದು, ಕರೆಕ್ಟ್. ಹಂಜಿಬುಟ್ಟಿಯಂಥ ಬಿಳಿತಲೆ ಮತ್ತೆ ನಿರಿಗೆ ಬಿದ್ದ ಮುಖದಲ್ಲಿ ಹೂನಗೆ ಅರಳಿಸ್ತಾರಲ್ಲ, ಅವರೇ ಸುಖೀರಾಮ್. ಅವರ ತಲೆಯಿಂದ ನಿರ್ಜರತ್ವದ ಕನಸು ಮತ್ತು ದೇಹದಿಂದ ಯಮನಕಾ ಫ್ಯಾಕ್ಟರ್ಸ್ – ಎರಡೂ ಇಳಿದುಹೋಗಿ ಕಂಗಳಲ್ಲಿ ಪ್ರೀತಿಯೊಂದೇ ಉಳಿದಿದೆ. ●